# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1170
ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 21.08.2025
ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; | **ರಾಜ್ಯದ ಕಾರಾಗೃಹಗಳಲ್ಲಿ ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.**<br><br>– ರಾಜ್ಯದ ಕೇಂದ್ರ ಕಾರಾಗೃಹಗಳಾದ ಬೆಂಗಳೂರು, ಬಳ್ಳಾರಿ, ಬೆಳಗಾವಿ, ಕಲಬುರಗಿ, ಧಾರವಾಡ, ವಿಜಯಪುರ, ಮೈಸೂರು, ಶಿವಮೊಗ್ಗ ಮತ್ತು ಮಂಗಳೂರು ಜಿಲ್ಲಾ ಕಾರಾಗೃಹಗಳಲ್ಲಿ ಹೊರ ಆವರಣದ ಭದ್ರತೆಗೆ ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆಯನ್ನು ನಿಯೋಜಿಸಲಾಗಿರುತ್ತದೆ.<br><br>– ಸಂಬಂಧಪಟ್ಟ ಜಿಲ್ಲೆಗಳ ಪೊಲೀಸ್ ಆಯುಕ್ತರು ಹಾಗೂ ಪೊಲೀಸ್ ಅಧೀಕ್ಷಕರ ಅಧ್ಯಕ್ಷತೆಯಲ್ಲಿ ಕಾರಾಗೃಹಗಳಲ್ಲಿ ಅಪರಾಧಗಳು ಮತ್ತು ಕಾನೂನು ಬಾಹಿರ ಚಟುವಟಿಕೆಗಳನ್ನು ನಿಯಂತ್ರಿಸಲು ಸಮಿತಿಗಳನ್ನು ಆದೇಶ ಸಂಖ್ಯೆ: CRM-3/03/2022 ದಿನಾಂಕ: 17.02.2022 ರಲ್ಲಿ ಪುನರ್ ರಚಿಸಲಾಗಿದ್ದು, ತ್ರೈಮಾಸಿಕವಾಗಿ ಸಭೆಗಳನ್ನು ನಡೆಸಲು ಅಗತ್ಯ ನಿರ್ದೇಶನಗಳನ್ನು ನೀಡಲಾಗಿರುತ್ತದೆ.<br><br>– ಕಾರಾಗೃಹಗಳಲ್ಲಿ ಜಂಟಿ ಭದ್ರತಾ ಪರಿಶೀಲನಾ ಸಭೆಗಳನ್ನು ನಡೆಸಿ, ಕ್ರಮವಹಿಸಲಾಗುತ್ತಿದೆ.<br><br>– ಕಾರಾಗೃಹಗಳಲ್ಲಿ ಪ್ರತಿನಿತ್ಯ ಬೀಗಮುದ್ರೆ ತೆರವಿನ ಮತ್ತು ಬೀಗಮುದ್ರೆ ಸಮಯದಲ್ಲಿ ತಪಾಸಣೆ ಜೊತೆಗೆ ಅನಿರೀಕ್ಷಿತ ತಪಾಸಣೆಯನ್ನು ಕಟ್ಟುನಿಟ್ಟಾಗಿ ಕೈಗೊಳ್ಳುವಂತೆ ವಿವಿಧ ಸುತ್ತೋಲೆಗಳನ್ನು ಹೊರಡಿಸಿದ್ದು, ಅದರಂತೆ ಎಲ್ಲಾ ಕಾರಾಗೃಹಗಳಲ್ಲಿ ತಪಾಸಣಾ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | - ಕಾರಾಗೃಹಗಳ ಭದ್ರತೆ ಹಾಗೂ ಆಡಳಿತ ವ್ಯವಸ್ಥೆಯನ್ನು ಬಲಪಡಿಸಿ, ಬಂದಿಗಳ ಚಲನವಲನಗಳ ಮೇಲೆ ಇನ್ನೂ ಹೆಚ್ಚಿನ ನಿಗಾವಹಿಸಲು ಮೊದಲ ಹಂತವಾಗಿ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಆಧುನಿಕ ತಂತ್ರಜ್ಞಾನ ಹೊಂದಿರುವ AI-powered Audio-Video Analytics system ಸಿಸಿಟಿವಿ ಕಣ್ಗಾವಲು ವ್ಯವಸ್ಥೆಯನ್ನು ಇ-ದರಖಾಸ್ತು ಮೂಲಕ ಕ್ರಮವಹಿಸಿ ಅಳವಡಿಸಲಾಗಿದೆ.<br><br>- ರಾಜ್ಯದ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ ಮತ್ತು ಮಂಗಳೂರು ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ 66 ಸಂಖ್ಯೆ ಮೊಬೈಲ್ ಜಾಮರ್‌ಗಳನ್ನು ದುರಸ್ತಿ ಮತ್ತು ಮೇಲ್ದರ್ಜೆಗೇರಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. ಬೆಂಗಳೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ ಮತ್ತು ಮಂಗಳೂರು ಕಾರಾಗೃಹಗಳಲ್ಲಿ ಜಾಮರ್‌ಗಳ ದುರಸ್ತಿ ಮತ್ತು ಮೇಲ್ದರ್ಜೆಗೇರಿಸುವ ಕಾರ್ಯ ಮುಕ್ತಾಯಗೊಂಡಿದ್ದು, ಮೈಸೂರು ಕೇಂದ್ರ ಕಾರಾಗೃಹದಲ್ಲಿನ ಜಾಮರ್‌ಗಳ ದುರಸ್ತಿ ಮತ್ತು ಮೇಲ್ದರ್ಜೆ ಕಾರ್ಯ ಅಂತಿಮ ಹಂತದಲ್ಲಿರುತ್ತದೆ.<br><br>- ಕಾರಾಗೃಹಗಳಲ್ಲಿ ಬಂದಿಗಳು ಅಕ್ರಮವಾಗಿ ಮೊಬೈಲ್ ಫೋನ್‌ಗಳನ್ನು ಬಳಸದಂತೆ ತಡೆಗಟ್ಟಲು ಮೊಬೈಲ್ ಸಿಗ್ನಲ್‌ಗಳು ದೊರಕದಂತೆ ಮಾಡಲು ಕೇಂದ್ರ ಗೃಹ ಮಂತ್ರಾಲಯದ ಶಿಫಾರಸ್ಸಿನನ್ವಯ ಮೊದಲ ಹಂತವಾಗಿ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ 03 ಸಂಖ್ಯೆ "Towers of Harmonius Call Blocking System (T-HCBS)" ತಂತ್ರಜ್ಞಾನವುಳ್ಳ ಟವರ್‌ಗಳನ್ನು ಅಳವಡಿಸಲಾಗಿರುತ್ತದೆ.<br><br>- ಕಾರಾಗೃಹಗಳಲ್ಲಿ ಮೊಬೈಲ್ ಫೋನ್‌ಗಳು ಮತ್ತು ಇತರೆ ಯಾವುದೇ ರೀತಿಯ ನಿಷೇಧಿತ ವಸ್ತುಗಳ ಕಳ್ಳ ಸಾಗಾಣಿಕೆಯನ್ನು ಹಾಗೂ ಅಪರಾಧ ಚಟುವಟಿಕೆಗಳನ್ನು ತಡೆಗಟ್ಟುವ ಸಲುವಾಗಿ ಕಾರಾಗೃಹದೊಳಗೆ ಪ್ರವೇಶಿಸುವ ಮತ್ತು ಹೊರಬರುವ ವ್ಯಕ್ತಿಗಳನ್ನು ಹಾಗೂ ವಸ್ತುಗಳನ್ನು ಪರಿಶೀಲಿಸಲು ಅತ್ಯಾಧುನಿಕ ಮಾದರಿಯ ತಪಾಸಣಾ ಉಪಕರಣಗಳಾದ X-ray Baggage Scanner, FG-1 Security Pole, HHMD, DFMD, DSMD ಹಾಗೂ Non Linear Junction Detector (NLJD) ಗಳನ್ನು ಒದಗಿಸಲಾಗಿರುತ್ತದೆ. |

| | | |
|---|---|---|
| | | _ 2024-25ನೇ ಸಾಲಿನಲ್ಲಿ ರಾಜ್ಯದ ವಿವಿಧ ಕಾರಾಗೃಹಗಳ ಆಡಳಿತ ಮತ್ತು ಭದ್ರತೆಯ ಹಿತದೃಷ್ಟಿಯಿಂದ ಅಗತ್ಯವಿರುವ ಒಟ್ಟು 279 ಸಂಖ್ಯೆ ಬಾಡಿವೋರ್ನ್ ಕ್ಯಾಮರಾ ಮತ್ತು 37 ಸಂಖ್ಯೆ ಡಾಕಿಂಗ್ ಸ್ಟೇಷನ್ ಉಪಕರಣಗಳನ್ನು ಇ-ದರಖಾಸ್ತು ಮೂಲಕ ಖರೀದಿಸಿ ಸರಬರಾಜು ಮಾಡಲಾಗಿರುತ್ತದೆ.<br><br>_ ರಾಜ್ಯದ ಕಾರಾಗೃಹಗಳಲ್ಲಿರುವ ಬಂದಿಗಳ ಚಲನ ವಲನಗಳ ಮೇಲೆ ಸೂಕ್ಷ್ಮವಾಗಿ ನಿಗಾ ವಹಿಸಲು ಅಗತ್ಯವಿರುವ ಸಿಸಿಟಿವಿ ಕ್ಯಾಮೆರಾ ಮತ್ತು ಪೂರಕ ಪರಿಕರಗಳನ್ನು ಅಳವಡಿಸಲಾಗಿದೆ.<br><br>_ 2024-25 ನೇ ಸಾಲಿನಲ್ಲಿ ಕಾರಾಗೃಹಗಳ ಭದ್ರತೆ ಹಾಗೂ ಆಡಳಿತ ವ್ಯವಸ್ಥೆಗೆ ಅಗತ್ಯವಿರುವ 19 ಸಂಖ್ಯೆ X-ray Baggage Scanner & 350 ವಾಕಿಟಾಕಿ ಉಪಕರಣಗಳನ್ನು ಖರೀದಿಸಿ ಒದಗಿಸಲಾಗಿದೆ. |
| ಆ) | ಕಾರಾಗೃಹಗಳಲ್ಲಿ ಎ.ಐ. ಕ್ಯಾಮೆರಾಗಳನ್ನು ಅಳವಡಿಸಲು ಸರ್ಕಾರ ಮುಂದಾಗಿದೆಯೇ ; | ಕಾರಾಗೃಹಗಳ ಭದ್ರತೆ ಹಾಗೂ ಆಡಳಿತ ವ್ಯವಸ್ಥೆಯನ್ನು ಬಲಪಡಿಸಿ, ಬಂದಿಗಳ ಚಲನವಲನಗಳ ಮೇಲೆ ಇನ್ನೂ ಹೆಚ್ಚಿನ ನಿಗಾವಹಿಸಲು ಮೊದಲ ಹಂತವಾಗಿ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿನ 280 ಸಂಖ್ಯೆ ಸಿಸಿಟಿವಿಗಳಿಗೆ ಆಧುನಿಕ ತಂತ್ರಜ್ಞಾನ ಹೊಂದಿರುವ AI-powered Audio-Video Analytics system ಕಣ್ಗಾವಲು ವ್ಯವಸ್ಥೆಯನ್ನು ಇ-ದರಖಾಸ್ತು ಮೂಲಕ ಕ್ರಮವಹಿಸಿ ಅಳವಡಿಸಲಾಗಿದೆ. |
| ಇ) | ಕಾರಾಗೃಹಗಳಲ್ಲಿ ಮೊಬೈಲ್ ಹಾಗೂ ಇನ್ನಿತರೆ ಎಲೆಕ್ಟ್ರಾನಿಕ್ ವಸ್ತುಗಳ ಬಳಕೆ ತಡೆಗಟ್ಟುವ ನಿಟ್ಟಿನಲ್ಲಿ ಅತ್ಯಾಧುನಿಕ ಜಾಮರ್‌ಗಳನ್ನು ಅಳವಡಿಸಲಾಗಿದೆಯೇ; | _ ಕಾರಾಗೃಹಗಳಲ್ಲಿ ಮೊಬೈಲ್ ಹಾಗೂ ಇನ್ನಿತರೆ ಎಲೆಕ್ಟ್ರಾನಿಕ್ ವಸ್ತುಗಳ ಬಳಕೆ ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದ ಬೆಂಗಳೂರು, ಮೈಸೂರು, ಕಲಬುರ್ಗಿ, ಬೆಳಗಾವಿ, ಧಾರವಾಡ, ಬಳ್ಳಾರಿ ಮತ್ತು ಮಂಗಳೂರು ಕಾರಾಗೃಹಗಳಲ್ಲಿ ಅಳವಡಿಸಲಾಗಿರುವ 66 ಸಂಖ್ಯೆ ಹಳೆಯ 2ಜಿ ಮೊಬೈಲ್ ಜಾಮಾರ್‌ಗಳನ್ನು, 4ಜಿ/5ಜಿಗೆ ಮೇಲ್ದರ್ಜೆಗೇರಿಸಿ ಮತ್ತು 03 ವರ್ಷಗಳ ವಾರ್ಷಿಕ ನಿರ್ವಹಣೆ ಕೈಗೊಳ್ಳಲು ಆದೇಶಿಲಾಗಿದೆ. ಕಾಮಗಾರಿ ಕಾರ್ಯ ಮುಕ್ತಾಯ ಹಂತದಲ್ಲಿರುತ್ತದೆ. |

| | | |
|---|---|---|
| ಈ) | ಜೈಲುಗಳ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಡಿಜಿಟಲ್ ಬೇಲಿಯನ್ನು ಅಳವಡಿಸಲು ಕ್ರಮ ಕೈಗೊಳ್ಳಲಾಗಿದೆಯೇ ? | ಕಾರಾಗೃಹಗಳ ಭದ್ರತೆಯ ಹಿತದೃಷ್ಟಿಯಿಂದ ಪ್ರಸ್ತುತ ರಾಜ್ಯದ ವಿವಿಧ ಕಾರಾಗೃಹಗಳ ಮುಖ್ಯ ಗೋಡೆಯ ಮೇಲೆ ರೇಜರ್ ಬ್ಲೇಡ್ ಫೆನ್ಸಿಂಗ್ ಅಳವಡಿಸಲಾಗಿರುತ್ತದೆ. |

ಸಂಖ್ಯೆ: ಹೆಚ್‌ಡಿ 233 ಪಿಆರ್‌ಎ 2025

(ಡಾ: ಜಿ. ಪರಮೇಶ್ವರ)
ಗೃಹ ಸಚಿವರು